# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 770 |
| ಮಾನ್ಯ ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13.03.2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಲೈಸೆನ್ಸ್ ಇಲ್ಲದೆ, ಪ್ರತಿ ಹಳ್ಳಿಗಳಲ್ಲಿಯೂ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು: | ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಗಡಿ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವ ಪ್ರಕರಣಗಳು ಗಮನಕ್ಕೆ ಬಂದಿರುತ್ತವೆ.<br>ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ರೂಟ್‌ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಸದರಿ ಗಸ್ತಿನ ಸಮಯದಲ್ಲಿ ಮತ್ತು ದೂರು ಸ್ವೀಕೃತವಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ, ಅಕ್ರಮಗಳು ಕಂಡುಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳಾನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕಲು ಕ್ರಮವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಚರಣೆ ನಡೆಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 50 ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ಮಾಹಿತಿ ನೀಡಲು ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿರುತ್ತದೆ |
| ಆ) | ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಕುರಿತು ಸಾರ್ವಜನಿಕರಿಂದ ದಾಖಲಾದ | ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ, ಕಳೆದ 02 ವರ್ಷಗಳಲ್ಲಿ ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ |

| | | |
|---|---|---|
| | ದೂರುಗಳ ಸಂಖ್ಯೆ ಎಷ್ಟು; ದೂರು ದಾಖಲಾದ ಮೇಲೆ ಸರ್ಕಾರ ಅಂತವರ ವಿರುದ್ಧ ಯಾವ ಕ್ರಮ ಕೈಗೊಂಡಿದೆ; (ಪ್ರಕರಣವಾರು ಮತ್ತು ಪೊಲೀಸ್ ಠಾಣೆವಾರು ಮಾಹಿತಿ ನೀಡುವುದು) | ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಒಟ್ಟು 937 ದೂರುಗಳು ಸ್ವೀಕೃತವಾಗಿದ್ದು, ಈ ಪೈಕಿ 926 ದೂರುಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಲಾಗಿರುತ್ತದೆ. ಈ ಸಂಬಂಧ, ಕರ್ನಾಟಕ ಅಬಕಾರಿ ಕಾಯ್ದೆಯಡಿ ಒಟ್ಟು 337 ಮೊಕದ್ದಮೆಗಳನ್ನು ದಾಖಲಿಸಿ, 195 ಆರೋಪಿತರನ್ನು ದಸ್ತಗಿರಿಗೆ ಒಳಪಡಿಸಲಾಗಿರುತ್ತದೆ ಹಾಗೂ ವಿವಿಧ ಪ್ರಕಾರದ 1080 ಲೀಟರ್ ಮದ್ಯವನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ವರ್ಷವಾರು, ವಲಯವಾರು ವಿವರವನ್ನು ಅನುಬಂಧ–(1) ಮತ್ತು (2) ರಲ್ಲಿ ನೀಡಲಾಗಿದೆ. |
| ಇ) | ಗಡಿ ಭಾಗದ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಸಾರ್ವಜನಿಕ ಹಿತದೃಷ್ಟಿಯಿಂದ ಸ್ವ–ಇಚ್ಛೆಯಿಂದ ಪ್ರಕರಣಗಳನ್ನು ದಾಖಲಿಸಲಾಗಿದೆಯೇ: ದಾಖಲಿಸಿದ್ದಲ್ಲಿ ಮಾಹಿತಿ ನೀಡುವುದು; | ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟದ ವಿರುದ್ಧ 2023–24ನೇ ಅಬಕಾರಿ ಸಾಲಿನಲ್ಲಿ ಒಟ್ಟು 6,471 ಮೊಕದ್ದಮೆಗಳನ್ನು ಮತ್ತು 2024–25ನೇ ಅಬಕಾರಿ ಸಾಲಿನಲ್ಲಿ (ಫೆಬ್ರವರಿ ಮಾಹೆಯ ಅಂತ್ಯದವರೆಗೆ) –1661 ಮೊಕದ್ದಮೆಗಳನ್ನು ದಾಖಲಿಸಿ ಅದೇ ಅವಧಿಯಲ್ಲಿ ಕ್ರಮವಾಗಿ 8,055 ಮತ್ತು 1917 ಆರೋಪಿತರನ್ನು ದಸ್ತಗಿರಿಗೊಳಪಡಿಸಲಾಗಿರುತ್ತದೆ. |
| ಈ) | ವಿಜಯಪುರ ಜಿಲ್ಲೆಯ ಗಡಿ ಭಾಗಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವವರೊಂದಿಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಅಬಕಾರಿ ಅಧಿಕಾರಿಗಳೇ ಶಾಮೀಲಾಗಿ ಅಕ್ರಮ ಮದ್ಯ ಮಾರಾಟ ಮಾಡಲು ಅನುವು ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ತಾಲ್ಲೂಕುವಾರು/ ಪ್ರಕರಣವಾರು ಸಂಪೂರ್ಣ ಮಾಹಿತಿ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗಲು ಯಾವದೇ ಅಬಕಾರಿ ಇಲಾಖೆಯ ಅಧಿಕಾರಿಗಳು ಶಾಮಿಲಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಆಇ 30 ಇಎಲ್‌ಕ್ಯೂ 2025

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

## ಅನುಬಂಧ-1

### 2023-24 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅಕ್ರಮ ಮದ್ಯ ಮಾರಾಟ ಸಂಬಂಧ ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳ ಸಂಬಂಧ ಇಲಾಖೆಯಿಂದ ಕೈಗೊಂಡ ಕ್ರಮದ ವಿವರ

| ಕ್ರ.ಸಂ | ಜಿಲ್ಲೆ | ವಲಯಗಳು | ಸ್ವೀಕೃತವಾದ ದೂರುಗಳ ಸಂಖ್ಯೆ | ಕ್ರಮ ಜರುಗಿಸಿ ವಿಲೇವಾರಿ ಮಾಡಲಾದ ದೂರುಗಳ ಸಂಖ್ಯೆ | ದೂರುಗಳ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | | | | ದಸ್ತಗಿರಿಗೊಳಿಸಿದ ಆರೋಪಿಗಳ ಸಂಖ್ಯೆ | ಜಪ್ತಿಪಡಿಸಿಕೊಂಡ ವಾಹನಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳ ವಿವರ | | | | | |
|---|---|---|---|---|---|---|---|---|---|---|---|---|---|---|---|---|
| | | | | | ಘೋರ | 15 ಎ | ಬಿಎಲ್‌ಸಿ | ಒಟ್ಟು | | | ಮದ್ಯ (ಲೀ) | ಬಿಯರ್ (ಲೀ) | ಕಳ್ಳಭಟ್ಟಿ ಸಾರಾಯಿ (ಲೀ) | ಬೆಲ್ಲದ ಕೊಳೆ (ಲೀ) | ಸೇಂದಿ (ಲೀ) | ಸಿಹೆಚ್ ಪೌಡರ್ (ಕೆ.ಜಿ) |
| 1 | ಬಾಗಲಕೋಟೆ | ಬದಾಮಿ | 8 | 8 | 1 | 2 | 2 | 5 | 3 | 0 | 11.3 | 0 | 0 | 0 | 0 | 0 |
| | | ಬಾಗಲಕೋಟೆ | 10 | 10 | 0 | 3 | 2 | 5 | 3 | 0 | 3.82 | 0 | 0 | 0 | 0 | 0 |
| | | ಬೀಳಗಿ | 5 | 5 | 0 | 0 | 1 | 1 | 0 | 0 | 0 | 0 | 0 | 0 | 0 | 0 |
| | | ಜಮಖಂಡಿ | 32 | 32 | 0 | 3 | 5 | 8 | 3 | 0 | 0.9 | 0 | 0 | 0 | 0 | 0 |
| | | ಮುದೋಳ | 21 | 21 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | | ಹುನಗುಂದ | 19 | 19 | 2 | 6 | 0 | 8 | 10 | 0 | 9.48 | 10.32 | 4.5 | 0 | 0 | 0 |
| | | **ಒಟ್ಟು** | **95** | **95** | **3** | **14** | **10** | **27** | **19** | **0** | **25.5** | **10.32** | **4.5** | **0** | **0** | **0** |
| 2 | ಬೆಳಗಾವಿ ಉತ್ತರ | ಚಿಕ್ಕೋಡಿ | 17 | 17 | 0 | 4 | 0 | 4 | 4 | 0 | 0.87 | 0 | 0 | 0 | 0 | 0 |
| | | ಗೋಕಾಕ | 21 | 21 | 0 | 7 | 1 | 8 | 17 | 0 | 1.6 | 0 | 0 | 0 | 0 | 0 |
| | | ಹುಕ್ಕೇರಿ | 25 | 25 | 0 | 6 | 1 | 7 | 6 | 0 | 1.06 | 0 | 0 | 0 | 0 | 0 |
| | | ಅಥಣಿ | 43 | 43 | 1 | 7 | 1 | 9 | 8 | 0 | 8.55 | 0 | 0 | 0 | 0 | 0 |
| | | ರಾಯಬಾಗ | 12 | 12 | 1 | 1 | 1 | 3 | 1 | 0 | 2.85 | 0 | 0 | 0 | 0 | 0 |
| | | **ಒಟ್ಟು** | **118** | **118** | **2** | **25** | **4** | **31** | **36** | **0** | **14.93** | **0** | **0** | **0** | **0** | **0** |
| 3 | ಬೆಳಗಾವಿ ದಕ್ಷಿಣ | ಬೆಳಗಾವಿ ವಲಯ ನಂ-1 | 3 | 3 | 1 | 1 | 1 | 3 | 1 | 0 | 0.63 | 0 | 0 | 0 | 0 | 0 |
| | | ಬೆಳಗಾವಿ ವಲಯ ನಂ-2 | 3 | 3 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | | ಬೆಳಗಾವಿ ವಲಯ ನಂ-3 | 2 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | | ಖಾನಾಪೂರ | 10 | 10 | 0 | 3 | 0 | 3 | 3 | 0 | 0.94 | 0 | 0 | 0 | 0 | 0 |
| | | ಬೈಲಹೊಂಗಲ | 33 | 33 | 4 | 8 | 4 | 16 | 8 | 1 | 648.05 | 0 | 0 | 0 | 0 | 0 |
| | | ಸವದತ್ತಿ ವಲಯ | 30 | 30 | 1 | 4 | 4 | 9 | 4 | 0 | 43.48 | 0 | 0 | 0 | 0 | 0 |
| | | ರಾಮದುರ್ಗ ವಲಯ | 25 | 25 | 0 | 9 | 3 | 12 | 9 | 0 | 8.7 | 0 | 0 | 0 | 0 | 0 |
| | | **ಒಟ್ಟು** | **106** | **106** | **6** | **25** | **12** | **43** | **25** | **1** | **701.8** | **0** | **0** | **0** | **0** | **0** |
| 4 | ವಿಜಯಪುರ | ವಿಜಯಪುರ | 38 | 38 | 2 | 13 | 3 | 18 | 0 | 0 | 11.52 | 0 | 5 | 5 | 0 | 0 |
| | | ಬ.ಬಾಗೇವಾಡಿ | 34 | 34 | 3 | 11 | 4 | 18 | 11 | 0 | 9.85 | 0 | 14 | 0 | 0 | 0 |
| | | ಇಂಡಿ | 45 | 45 | 0 | 0 | 6 | 6 | 0 | 0 | 0 | 0 | 0 | 0 | 0 | 0 |
| | | ಮುದ್ದೆಬಿಹಾಳ | 28 | 28 | 0 | 25 | 1 | 26 | 25 | 0 | 4.4 | 0 | 0 | 0 | 0 | 0 |
| | | ಸಿಂದಗಿ | 62 | 62 | 7 | 25 | 0 | 32 | 32 | 0 | 110.61 | 22.8 | 0 | 0 | 0 | 0 |
| | | **ಒಟ್ಟು** | **207** | **207** | **12** | **74** | **14** | **100** | **68** | **0** | **136.38** | **22.8** | **19** | **5** | **0** | **0** |
| **4 ಜಿಲ್ಲೆಗಳ ಒಟ್ಟು** | | | **526** | **526** | **23** | **138** | **40** | **201** | **148** | **1** | **878.61** | **33.12** | **23.5** | **5** | **0** | **0** |

ಅನುಬಂಧ-2

## 2024-25 ನೇ ಸಾಲಿನ (ಫೆಬ್ರವರಿ ಮಾಹೆಯ ಅಂತ್ಯದವರೆಗೆ) ಆರ್ಥಿಕ ವರ್ಷದಲ್ಲಿ ಅಕ್ರಮ ಮದ್ಯ ಮಾರಾಟ ಸಂಬಂಧ ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳ ಸಂಬಂಧ ಇಲಾಖೆಯಿಂದ ಕೈಗೊಂಡ ಕ್ರಮದ ವಿವರ

| ಕ್ರ.ಸಂ | ಜಿಲ್ಲೆ | ವಲಯಗಳು | ಸ್ವೀಕೃತವಾದ ದೂರುಗಳ ಸಂಖ್ಯೆ | ಕ್ರಮ ಜರುಗಿಸಿ ವಿಲೇವಾರಿ ಮಾಡಲಾದ ದೂರುಗಳ ಸಂಖ್ಯೆ | ದೂರುಗಳ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ | | | | ದಸ್ತಗಿರಿಗೊಳಿಸಿದ ಆರೋಪಿಗಳ ಸಂಖ್ಯೆ | ಜಪ್ತಿಪಡಿಸಿಕೊಂಡ ವಾಹನಗಳ ಸಂಖ್ಯೆ | ವಶಪಡಿಸಿಕೊಂಡ ವಸ್ತುಗಳ ವಿವರ | | | | | |
|---|---|---|---|---|---|---|---|---|---|---|---|---|---|---|---|---|
| | | | | | ಘೋರ | 15 ಎ | ಬಿಎಲ್‌ಸಿ | ಒಟ್ಟು | | | ಮದ್ಯ (ಲೀ) | ಬಿಯರ್ (ಲೀ) | ಕಳ್ಳಭಟ್ಟಿ ಸಾರಾಯಿ (ಲೀ) | ಬೆಲ್ಲದ ಕೊಳೆ (ಲೀ) | ಸೇಂದಿ (ಲೀ) | ಸಿಹೆಚ್ ಪೌಡರ್ (ಕೆ.ಜಿ) |
| 1 | ಬಾಗಲಕೋಟೆ | ಬದಾಮಿ | 16 | 16 | 1 | 4 | 2 | 7 | 5 | 0 | 0.36 | 0 | 3 | 0 | 0 | 0 |
| | | ಬಾಗಲಕೋಟೆ | 6 | 6 | 0 | 0 | 2 | 2 | 0 | 0 | 0 | 0 | 0 | 0 | 0 | 0 |
| | | ಬೀಳಗಿ | 4 | 4 | 1 | 0 | 1 | 2 | 1 | 0 | 0 | 0 | 2 | 60 | 0 | 0 |
| | | ಜಮಖಂಡಿ | 27 | 27 | 0 | 2 | 0 | 2 | 2 | 0 | 0.36 | 0 | 0 | 0 | 0 | 0 |
| | | ಮುಧೋಳ | 12 | 12 | 0 | 5 | 0 | 5 | 5 | 0 | 0.45 | 0 | 0 | 0 | 0 | 0 |
| | | ಹುನಗುಂದ | 6 | 6 | 1 | 2 | 0 | 3 | 3 | 0 | 9.16 | 10 | 0 | 0 | 0 | 0 |
| | | **ಒಟ್ಟು** | **71** | **71** | **3** | **13** | **5** | **21** | **16** | **0** | **10.33** | **10** | **5** | **60** | **0** | **0** |
| 2 | ಬೆಳಗಾವಿ ಉತ್ತರ | ಚಿಕ್ಕೋಡಿ | 12 | 12 | 0 | 7 | 1 | 8 | 7 | 0 | 1.4 | 0 | 0 | 0 | 0 | 0 |
| | | ಗೋಕಾಕ | 19 | 19 | 0 | 5 | 1 | 6 | 5 | 0 | 1.4 | 0 | 0 | 0 | 0 | 0 |
| | | ಹುಕ್ಕೇರಿ | 22 | 21 | 0 | 7 | 1 | 8 | 7 | 0 | 0.99 | 0 | 0 | 0 | 0 | 0 |
| | | ಅಥಣಿ | 21 | 17 | 0 | 5 | 1 | 6 | 5 | 0 | 1.52 | 0 | 0 | 0 | 0 | 0 |
| | | ರಾಯಬಾಗ | 28 | 27 | 0 | 7 | 1 | 8 | 7 | 0 | 0.69 | 0.35 | 0 | 0 | 0 | 0 |
| | | **ಒಟ್ಟು** | **102** | **96** | **0** | **31** | **5** | **36** | **31** | **0** | **5.7** | **0.35** | **0** | **0** | **0** | **0** |
| 3 | ಬೆಳಗಾವಿ ದಕ್ಷಿಣ | ಬೆಳಗಾವಿ ವಲಯ ನಂ-1 | 8 | 8 | 1 | 0 | 2 | 3 | 0 | 0 | 0 | 0 | 10 | 0 | 0 | 0 |
| | | ಬೆಳಗಾವಿ ವಲಯ ನಂ-2 | 7 | 7 | 0 | 0 | 2 | 2 | 0 | 0 | 0.25 | 0 | 0 | 0 | 0 | 0 |
| | | ಬೆಳಗಾವಿ ವಲಯ ನಂ-3 | 9 | 9 | 0 | 3 | 0 | 3 | 0 | 0 | 0.21 | 0 | 0 | 0 | 0 | 0 |
| | | ಖಾನಾಪೂರ | 5 | 5 | 0 | 0 | 1 | 1 | 0 | 0 | 0 | 0 | 0 | 0 | 0 | 0 |
| | | ಬೈಲಹೊಂಗಲ | 19 | 19 | 1 | 3 | 1 | 5 | 0 | 0 | 5.36 | 0 | 0 | 0 | 0 | 0 |
| | | ಸವದತ್ತಿ ವಲಯ | 27 | 27 | 1 | 5 | 4 | 10 | 0 | 0 | 6.84 | 0 | 0 | 0 | 0 | 0 |
| | | ರಾಮದುರ್ಗ ವಲಯ | 21 | 21 | 0 | 7 | 1 | 8 | 0 | 0 | 0.21 | 0 | 0 | 0 | 0 | 0 |
| | | **ಒಟ್ಟು** | **96** | **96** | **3** | **18** | **11** | **32** | **0** | **0** | **12.87** | **0** | **10** | **0** | **0** | **0** |
| 4 | ವಿಜಯಪುರ | ವಿಜಯಪುರ | 28 | 27 | 0 | 7 | 4 | 11 | 0 | 0 | 0 | 0 | 0 | 0 | 0 | 0 |
| | | ಬ.ಬಾಗೇವಾಡಿ | 24 | 24 | 0 | 1 | 1 | 2 | 0 | 0 | 0.11 | 0 | 0 | 0 | 0 | 0 |
| | | ಇಂಡಿ | 23 | 23 | 0 | 16 | 0 | 16 | 0 | 0 | 2.67 | 0 | 0 | 0 | 0 | 0 |
| | | ಮುದ್ದೇಬಿಹಾಳ | 40 | 36 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | | ಸಿಂದಗಿ | 27 | 27 | 1 | 16 | 1 | 18 | 0 | 0 | 7.47 | 14.8 | 0 | 0 | 0 | 0 |
| | | **ಒಟ್ಟು** | **142** | **137** | **1** | **40** | **6** | **47** | **0** | **0** | **10.25** | **14.8** | **0** | **0** | **0** | **0** |
| **4 ಜಿಲ್ಲೆಗಳ ಒಟ್ಟು** | | | **411** | **400** | **7** | **102** | **27** | **136** | **47** | **0** | **39.15** | **25.15** | **15** | **60** | **0** | **0** |